ಅವಳದು. ಕಣ್ಣುಮೂಗೆಲ್ಲ ತಿದ್ದಿತೀಡಿದಂತಿದೆ. ಬಣ್ಣವೊಂದು ಅಂತಹ ಬಿಳಿಯಲ್ಲ; ಸ್ವಲ್ಪ ಕಂದು. ಆದರೆ ಅದು ಅಂತಹ ಕೊರತೆಯಲ್ಲ. ನಿರ್ದೇಶಕರಿಗೆ, ಕ್ಯಾಮರಾಮನ್ನುಗಳಿಗೆ ಒಳಗಣ್ಣುಗಳಿರುತ್ತವೆ ಅಂತ ಓದಿದ್ದಳು. ಅದೆಲ್ಲ ಯಾಕೆ... ಎಸ್ಸೆಸ್ಸೆಲ್ಸಿಯಲ್ಲಿ ತನ್ನ ಕ್ಲಾಸ್ಮೇಟಾಗಿದ್ದ ಆ ಜಾಹ್ನವಿಗೇನಿತ್ತು? ಎಲ್ಲಾ ಸಪಾಟು; ಕುಳ್ಳಿ ಬೇರೆ. ಹೇಗೋ ಕನ್ನಡ ಸೀರಿಯಲ್ ಒಂದರಲ್ಲಿ ಪಾತ್ರ ಸಿಕ್ಕು, ನಿತ್ಯ ರಾತ್ರಿ ಟೀವಿ ನೋಡಿದ್ರಾಳಲ್ಲ! ಇಷ್ಟು ಚೆನ್ನಾಗಿದ್ದಳಾ ಅನಿಸಿತ್ತು. ಆಮೇಲೆ ಒಂದು ಸಿನಿಮಾದಲ್ಲು ಛಾನ್ಸು ಸಿಕ್ಕಿತ್ತು. ನಿರ್ದೇಶಕ ಅವಳಲ್ಲಿ ಗುಡ್ಡಬೆಟ್ಟ ಸೃಷ್ಟಿಸಿ, ಹಳ್ಳಕೊಳ್ಳ ಕೊರೆದು ಇಂದ್ರಜಾಲ ಮಾಡಿ, ಇದು ಅವಳೇನಾ ಅಂತ ಬೆರಗು ಪಡುವಂತಾಗಿದ್ದು ಎದುರಿಗೇ ಇದೆ. ಎರಡೂ ಕೈಗಳನ್ನು ನಿಧಾನವಾಗಿ ಎತ್ತಿ ತಲೆಯ ಹಿಂದೆ ಬೆರಳುಗಳನ್ನು ಹೆಣೆದಳು. ಎದೆಯಬಿಲ್ಲುಗಳಿಗೆ ಹೆದೆಯೇರಿಸಿದಂತೆ ಬಿಗಿದುಕೊಂಡು, ಕೆಳಗೆ ಹೊಟ್ಟೆ ಇನ್ನಷ್ಟು ನಿಮ್ನವಾಗಿ ತನಗೆ ನೈಸರ್ಗಿಕವಾಗೆ ಎಲ್ಲಾ ಇದೆ ಎಂಬ ತೃಪ್ತಿಯೊಂದಿಗೆ ಆತ್ಮವಿಶ್ವಾಸ ಇಮ್ಮಡಿಯಾಯ್ತು. ಹೊರಗೆ ಸದ್ದಾದಂತಾಗಿ ಬಟ್ಟೆ ಹಾಕಿಕೊಂಡಳು. ಮಂಚದ ಮೇಲೆ ಕುಳಿತವಳಿಗೆ ಪಕ್ಕದ ಮೇಜಿನ ಮೇಲೆ ರಾಶಿರಾಶಿ ಪುಸ್ತಕಗಳು, ನೋಟು ಬುಕ್ಕುಗಳು ಕಂಡವು. ಪಿಯುಸಿ ಫೇಲಾಗಿಹೋಗಿತ್ತು. ಎಸ್ಸೆಸ್ಸೆಲ್ಸಿವರೆಗೆ ಚೆನ್ನಾಗಿಯೆ ಇತ್ತು. ರ್‍ಯಾಂಕು ಪಡೆದವಳಲ್ಲವಾದರೂ ಪ್ರಥಮದರ್ಜೆಯ ಬುದ್ಧಿವಂತ ವಿದ್ಯಾರ್ಥಿನಿಯೇ. ಪಿಯುಸಿಗೆ ಬಂದಾಗ ಅದೇನಾಯ್ತೋ ಕಣ್ಣು ಓದಿದ ಸಾಲನ್ನೆ ಮತ್ತೆಮತ್ತೆ ಓದುತ್ತಿರುತ್ತದೆ; ಮನಸ್ಸು ಇದ್ದಕ್ಕಿದ್ದಂತೆ ಮತ್ತೆಲ್ಲೋ ಅಲೆಯುತ್ತಿರುತ್ತದೆ. ಇಲ್ಲ, ಈ ಸಾರಿ ಹಟ ಹೊತ್ತು ಪಾಸಾಗಲೇಬೇಕು. ಪಾಸಾದ ನಂತರ ಮತ್ತೇನು ಅನ್ನುವ ಆಲೋಚನೆ ಬಂತು. ಒಳ್ಳೆಯ ಕೆಲಸ ಹಿಡಿಯಬೇಕು, ಆದರೆ ಪಿಯುಸಿ ಸಾಲದು. ಬಿ.ಎ, ಎಂಎ ಓದಬೇಕು. ಮನೆಯವರು ಅಷ್ಟೆಲ್ಲಾ ಓದಿಸ್ತಾರಾ? ಸುಮ್ಮನಿರದೆ ಮದುವೆಯಾಗು ಅಂತ ಒತ್ತಡ ಸುರುಮಾಡಿದರೆ?... ಯಾರು ಸುಮ್ಮನಿದ್ದರೂ ಈ ಅಜ್ಜಿ ಸುಮ್ಮನಿರೊ ಪೈಕಿಯಲ್ಲ ಅನ್ನುವ ಭಯ ಸುರುವಾಯ್ತು. ಅದೆಲ್ಲ ಸರಿ, ಬಿಎ, ಎಂಎ ಆದ ಮೇಲಾದರೂ ಯಾರ್ನೋ ಹುಡುಕಿ ಮದುವೆ ಮಾಡೇಮಾಡತಾರೆ. ಛೆ! ಇಂಥಾ ಅಪರೂಪದ ಅಂಗಸೌಷ್ಟವ ಇಟ್ಟುಕೊಂಡು ಯಾರನ್ನೊ ಕಟ್ಟಕೊಂಡು, ಅವನಿಗೆ ಅಡುಗೆ ಮಾಡುತ್ತಾ, ಅವನ ಮಕ್ಕಳನ್ನು ಹಡೆಯುತ್ತಾ ಅಜ್ಞಾತವಾಗೆ ಉಳಿದು ಒಂದು ದಿನ ಮುದುಕಿಯಾಗಿ... ಥತ್!... ಹತಾಶೆಯಾವರಿಸಿ ನಿಟ್ಟುಸಿರು ಹೊರಬಂತು.

ಈ ಅಂಗಸೌಷ್ಟವ ಕತ್ತೇಹಾಲು ಕುಡಿದಿದ್ದಕ್ಕೇ ಬಂದಿರಬಹುದು. ತಾನು ಚಿಕ್ಕವಳಿರುವಾಗ ಅಜ್ಜಿ ಹೇಳುತ್ತಿದ್ದಳು. ಕತ್ತೆಗೆ ಹೊರ ಸೌಂದರ್ಯವಿಲ್ಲವಂತೆ. ಆದರೆ, ಎಲ್ಲಾ ಒಳಗಿಟ್ಟಿದ್ದಾನಂತೆ ದೇವರು. ಅದು ಸ್ಥಿತಪ್ರಜ್ಞ. ಮಳೆ, ಬಿಸಿಲಿಗೆ ತಲೆಕೆಡಿಸಿಕೊಳ್ಳುವುದಿಲ್ಲ. ಎಷ್ಟೆಲ್ಲಾ ಭಾರಹೊರುವಷ್ಟು ಕ್ಷಮತೆಯಿದೆ ಅದಕ್ಕೆ. ಅದ್ಭುತ ಪುರುಷತ್ವವಂತೆ ಅದರದು. ಅದರ ಹಾಲು ಕುಡಿದರೆ ಗಂಡಸು ಗಟ್ಟಿ ಪುರುಷತ್ವದವನಾದರೆ ಹೆಂಗಸು ಅಸಾಧಾರಣ ಹೆಣ್ಣುತನ ಪಡೀತಾಳಂತೆ ಮತ್ತೂ ಏನೇನೋ ಹೇಳುತ್ತಿದ್ದಳು ಅಜ್ಜಿ.

**2**

ಮೊಮ್ಮಗಳು ಹಿರಿಯರಿಟ್ಟ ಹೆಸರನ್ನೇ ಧಿಕ್ಕರಿಸಿ ಬದಲಿಸಿಕೊಳ್ಳುವಂತ ಧಾರ್ಷ್ಟ್ಯ ತೋರಿಸಿದ್ದಕ್ಕೆ ಮಗ, ಮೊಮ್ಮಕ್ಕಳಿಂದ ದೊಡ್ಡ ಪ್ರತಿಕ್ರಿಯೆಯನ್ನೇ ನಿರೀಕ್ಷಿಸಿದ್ದ ಕೆಂಪಮ್ಮನಿಗೆ ಮುಖಭಂಗವಾಗಿತ್ತು. ನಡುಮನೆಯಲ್ಲಿ ಯಾವಾಗಿನ ಜಾಗದಲ್ಲಿ ಮಲಗಿದವಳಿಗೆ ಊರೆಲ್ಲ ನಿಶ್ಶಬ್ದವಾದರೂ ನಿದ್ದೆ ಸುಳಿದಿರಲಿಲ್ಲ. ಬೆಕ್ಕಿಲ್ಲದ ಮನೆಯಲ್ಲಿ ಇಲಿಗಳು ಲಾಗಾ ಹೊಡೆದವಂತೆ.